## ೧೬.೦೬.೨೦೧೨ರಂದು ನಡೆದ ಪ್ರಶಾಸನ ಸಮಿತಿ ೫ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೫ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜೂನ್ ೧೬, ೨೦೧೨ರ ಶನಿವಾರ ಮಧ್ಯಾಹ್ನ ೦೨.೩೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ನಾಗರಾಜಪ್ಪ,** ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ, (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೩. | **ಶ್ರೀಮತಿ ವಿ.ಎಚ್. ಕಮಲಾ ಬಾಯಿ,** ಉಪ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೪. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೫. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೬. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೭. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೮. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೯. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೧೦. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೧೧. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |
| ೧೨. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೧೩. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೪. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಪ್ರಧಾನ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ನಾಲ್ಕನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 16.05.2012ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ನಾಲ್ಕನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 3**: 'ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಪರಿನಿಯಮ–2012'ಅನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. **ವಿಷಯ ಸಂಖ್ಯೆ 6:** ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ಸಂಸ್ಕೃತ ಪಾಠಶಾಲೆಗಳ ಶಿಕ್ಷಕರ ನೇಮಕಾತಿ ಮಾಡುವ ಬಗೆಗಿನ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆ ಹಾಗೂ ಒಪ್ಪಿಗೆಗಾಗಿ ಕಳುಹಿಸಿಕೊಡಲಾಗಿದೆ. **ವಿಷಯ ಸಂಖ್ಯೆ 7:** ಸಂಸ್ಕೃತ ಪಾಠಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನಶ್ರೇಣಿಯನ್ನು ನಿಗದಿಗೊಳಿಸುವ ಪ್ರಸ್ತಾವನೆಯ ಬಗೆಗೆ ಇಲಾಖಾಮಟ್ಟದಲ್ಲಿ ಕ್ರಮಕೈಗೊಳ್ಳಲಾಗಿದೆ. **ವಿಷಯ ಸಂಖ್ಯೆ 8:** ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಗಳಿಕೆರಜೆ ಮಂಜೂರಾತಿ ಸಂಬಂಧವಾಗಿ ನಿರ್ದೇಶನಾಲಯವು ಕ್ರಮವಹಿಸಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

**ವಿಷಯ ಸಂಖ್ಯೆ 8:** ಡಾ. ಎಚ್.ಕೆ. ಸುರೇಶ್, ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಕಾಲೇಜು, ಉಡುಪಿ –ಇವರ ವೇತನಶ್ರೇಣಿ ನಿಗದೀಕರಣಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 9:** ಸಿ.ಎಲ್.ವೈ. ಸಂಸ್ಕೃತ ಕಾಲೇಜಿನ ಮಯೂರೇಶ ಶಾಸ್ತ್ರೀ

ಇನಾಮದಾರ –ಇವರನ್ನು ಕೋರಿಕೆ ವರ್ಗಾವಣೆ ಮಾಡುವ ಮತ್ತು ಖಾಲಿಯಾದ ಹುದ್ದೆಯನ್ನು ತುಂಬಿಕೊಳ್ಳುವ ಬಗೆಗೆ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 11:** C-DAC ತರಬೇತಿ ಕಾರ್ಯಕ್ರಮ ಆಯೋಜಿಸುವ ಬಗೆಗೆ ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರಿಗೆ ಪತ್ರ ಬರೆಯಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವರದಿಯನ್ನು ಗಮನಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 2: ಮೈಸೂರಿನ ಮಹಾನಗರ ಪಾಲಿಕೆಗೆ ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿಗೆ ಸಂಬಂಧಪಟ್ಟ ಉಪಕರ 14,86,469/– ರೂ.ಗಳನ್ನು ಕಟ್ಟುವ ಬಗೆಗೆ.**

ಟಿಪ್ಪಣಿ: ಆದೇಶ ಸಂಖ್ಯೆ: ಇಡಿ 358 ಯುಆರ್‌ಸಿ 2011, ದಿನಾಂಕ: 27.02.2012ರಲ್ಲಿ ಘಟಕ ಕಾಲೇಜುಗಳ ಚರ–ಸ್ಥಿರಾಸ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿ ಆದೇಶಿಸಿದೆ. ಅದರಂತೆ ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಸ್ಥಿರಾಸ್ತಿಯ ಖಾತೆಯನ್ನು ವಿಶ್ವವಿದ್ಯಾಲಯದ ಹೆಸರಿಗೆ ಬದಲಾಯಿಸಿಕೊಡುವಂತೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಪತ್ರ ಬರೆದು ಕೋರಲಾಗಿತ್ತು. ಮೈಸೂರು ಮಹಾನಗರ ಪಾಲಿಕೆ ಆಯುಕ್ತರು ತಮ್ಮ ಪತ್ರ ಸಂಖ್ಯೆ: ಮೈ.ನ.ಪಾ/ಸ.ಆ/ವ.ಕ–1/2012–13; ದಿನಾಂಕ: 21.05.2012ರಲ್ಲಿ ಕಾಲೇಜಿಗೆ ಸಂಬಂಧಿಸಿದ 1998ರಿಂದ 2002ರವರೆಗೆ ಎ.ಆರ್.ವಿ. ಮತ್ತು 2002–03ರಿಂದ 2012ರವರೆಗೆ ಉಪಕರಗಳ ಮೊತ್ತ ರೂ. 14,86,469/–ಗಳನ್ನು ಪಾವತಿಸಿದ ನಂತರ ಮುಂದಿನ ಕ್ರಮಕೈಗೊಳ್ಳುವುದಾಗಿ ಸೂಚಿಸಿರುತ್ತಾರೆ ಹಾಗೂ ಖಾತಾ ಬದಲಾವಣೆಗೆ 10,000/– ರೂ.ಗಳನ್ನು ನೀಡಬೇಕಾದ ಹಿನ್ನೆಲೆಯಲ್ಲಿ **ರೂ. 14,86,469/– ಮತ್ತು ರೂ. 10,000/–ಗಳನ್ನು ಮೈಸೂರು ಮಹಾನಗರ ಪಾಲಿಕೆಗೆ ಅಭಿವೃದ್ಧಿ ಅನುದಾನದಿಂದ ಪಾವತಿಸಲಾಗಿದ್ದು** ಸಭೆಯ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ: **ಮೇಲ್ಕಂಡ ಎಲ್ಲ ವಿವರಗಳನ್ನು ಗಮನಿಸಿ ರೂ. 14,96,469/–ಗಳ ಪಾವತಿಗೆ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 3: ವೃಂದ ಮತ್ತು ನೇಮಕಾತಿ ಪರಿನಿಯಮ–2012 ಅನುಸಾರ ಬೋಧಕ–ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010; ದಿನಾಂಕ: 25.01.2011ರಲ್ಲಿ **133 ಬೋಧಕ–ಬೋಧಕೇತರ ಹುದ್ದೆ**ಗಳನ್ನು ಸೃಜಿಸಿಕೊಳ್ಳಲು ಸರ್ಕಾರವು ಆದೇಶಿಸಿರುತ್ತದೆ. ಅದರಂತೆ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ **'ವೃಂದ ಮತ್ತು ನೇಮಕಾತಿ ಪರಿನಿಯಮ–2012'**ಅನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯದ ಸೂಕ್ತ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ರಾಜ್ಯಪಾಲರ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿತ್ತು. ಸರ್ಕಾರಿ ಪತ್ರ ಸಂಖ್ಯೆ: ಇಡಿ 213 ಯುಆರ್‌ಸಿ 2011; ದಿನಾಂಕ: 25.05.2012ರ ಅನ್ವಯ ರಾಜ್ಯಪಾಲರಿಂದ ಅಂಕಿತಗೊಂಡ ವೃಂದ ಮತ್ತು ನೇಮಕಾತಿ ಪರಿನಿಯಮವನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಚಾಲನೆಗೊಳಿಸಲು ಈಗಾಗಲೇ ಸೃಜನೆಗೊಂಡಿರುವ **133 ಹುದ್ದೆ**ಗಳಲ್ಲಿ 2012–13ನೇ ಸಾಲಿನಲ್ಲಿ ಮೊದಲ ಹಂತವಾಗಿ **76 ಹುದ್ದೆ**ಗಳನ್ನು ವಿಶ್ವವಿದ್ಯಾಲಯದ ವಿಭಾಗಗಳನ್ನು ತೆರೆದು ತುಂಬಲು ನೇಮಕ ಮಾಡಿಕೊಳ್ಳಬಹುದಾಗಿದೆ. ಅನಂತರ 2013–14ನೇ ಸಾಲಿನಲ್ಲಿ ಉಳಿದ **57 ಹುದ್ದೆ**ಗಳನ್ನು ಭರ್ತಿ ಮಾಡಿಕೊಳ್ಳಬಹುದಾಗಿದೆ. ಈ ಎಲ್ಲ ವಿವರಗಳನ್ನು ಸಭೆಯ ಚರ್ಚೆಗಾಗಿ ಮಂಡಿಸಿದೆ. 2012–13ನೇ ಸಾಲಿನಲ್ಲಿ ಆಡಳಿತಾಂಗ, ಪ್ರಸಾರಾಂಗ, ಅಧ್ಯಯನಾಂಗ ಹಾಗೂ ವಿವಿಧ ವಿಭಾಗಗಳಿಗೆ ನೇಮಕ ಮಾಡಿಕೊಳ್ಳಬಹುದಾದ ಬೋಧಕ–ಬೋಧಕೇತರ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ. | ಪದನಾಮ | ಶ್ರೇಣಿ | ವೇತನಶ್ರೇಣಿ | ಮಾಸಿಕ ವೇತನ | ಮಂಜೂರು ಆದ ಹುದ್ದೆಗಳು | ಭರ್ತಿ ಮಾಡಿಕೊಳ್ಳುವ ಹುದ್ದೆಗಳು | ವಾರ್ಷಿಕ ವೇತನ (ಮಾಸಿಕ ವೇತನ x ಹುದ್ದೆಗಳು) |
|---|---|---|---|---|---|---|---|
| **I ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು** | | | | | | | |
| 01. | ಪ್ರಾಧ್ಯಾಪಕರು | ಎ | 37400–67400+AGP | 87,042.00 | 10 | 05 | 52,22,520.00 |
| 02. | ಸಹಪ್ರಾಧ್ಯಾಪಕರು | ಎ | 37400–67400+ AGP | 85,212.00 | 15 | 05 | 51,12,720.00 |
| 03. | ಸಹಾಯಕ ಪ್ರಾಧ್ಯಾಪಕರು | ಎ | 15600–39100+ AGP | 39,828.00 | 20 | 10 | 47,79,360.00 |
| | **ಒಟ್ಟು** | | | | | **20** | **1,51,14,600.00** |
| **II ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು** | | | | | | | |
| 01. | ಗ್ರಂಥಪಾಲಕ | ಎ | 37400–67400+AGP | 87,042.00 | 01 | 01 | 10,44,504.00 |
| 02. | ಉಪ ಗ್ರಂಥಪಾಲಕ | ಎ | 37400–67400+AGP | 85,212.00 | 02 | 02 | 20,45,088.00 |
| 03. | ಸಹಾಯಕ ಗ್ರಂಥಪಾಲಕ | ಎ | 15600–39100+ AGP | 39,828.00 | 03 | 02 | 9,55,872.00 |
| | **ಒಟ್ಟು** | | | | | **05** | **40,45,464.00** |
| **III ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಗಳು** | | | | | | | |
| 01. | ಯೋಜನಾ ಸಹಾಯಕರು | ಬಿ | 21600–40050 | 27,400.00 | 26 | 10 | 32,88,000.00 |
| | **ಒಟ್ಟು** | | | | | **10** | **32,88,000.00** |

| IV ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು | | | | | | | |
|---|---|---|---|---|---|---|---|
| 01. | ಉಪ ಕುಲಸಚಿವರು | ಎ | 40050–56550 | 50,463.00 | 01 | 01 | 6,05,556.00 |
| 02. | ಉಪ ನಿರ್ದೇಶಕರು | ಎ | 36300–53850 | 45,775.00 | 02 | 02 | 10,98,600.00 |
| 03. | ಕುಲಪತಿಗಳ ಆಪ್ತಕಾರ್ಯದರ್ಶಿ | ಎ | 28100–50100 | 35,525.00 | 01 | 01 | 4,26,300.00 |
| 04. | ಸಹಾಯಕ ಕುಲಸಚಿವರು | ಎ | 28100–50100 | 35,525.00 | 02 | 02 | 8,52,600.00 |
| 05. | ಸಹಾಯಕ ನಿರ್ದೇಶಕರು | ಎ | 28100–50100 | 35,525.00 | 02 | 02 | 8,52,600.00 |
| 06. | ಶಾಖಾಧಿಕಾರಿ | ಬಿ | 21600–40050 | 27,400.00 | 01 | 01 | 3,28,800.00 |
| 07. | ಕಂಪ್ಯೂಟರ್ ಆಪರೇಟರ್ | ಬಿ | 21600–40050 | 27,400.00 | 01 | 01 | 3,28,800.00 |
| 08. | ಸಹಾಯಕರು | ಸಿ | 16000–29600 | 20,350.00 | 03 | 02 | 4,88,400.00 |
| 09. | ಶೀಘ್ರಲಿಪಿಗಾರರು | ಸಿ | 16000–29600 | 20,350.00 | 01 | 01 | 2,44,200.00 |
| 10. | ಗ್ರಂಥಾಲಯ ಸಹಾಯಕರು | ಸಿ | 16000–29600 | 20,350.00 | 02 | 02 | 4,88,400.00 |
| 11. | ಡಾಟಾ ಎಂಟ್ರಿ ಆಪರೇಟರ್ | ಸಿ | 14550–26700 | 18,538.00 | 02 | 02 | 4,44,912.00 |
| 12. | ವಾಹನ ಚಾಲಕರು | ಸಿ | 12500–24000 | 15,975.00 | 02 | 02 | 3,83,400.00 |
| 13. | ಕಿರಿಯ ಸಹಾಯಕರು | ಸಿ | 11600–21000 | 14,850.00 | 04 | 03 | 5,34,600.00 |
| 14. | ಟೆಲಿಫೋನ್ ಆಪರೇಟರ್ | ಸಿ | 11600–21000 | 14,850.00 | 02 | 02 | 3,56,400.00 |
| 15. | ವಿಶ್ರಾಂತಿಗೃಹ ಮೇಲ್ವಿಚಾರಕರು | ಡಿ | 10400–16400 | 13,350.00 | 02 | 02 | 3,20,400.00 |
| 16. | ಅಡಿಗೆಯವರು | ಡಿ | 10400–16400 | 13,350.00 | 01 | 01 | 1,60,200.00 |
| 17. | ಅಡಿಗೆ ಸಹಾಯಕರು | ಡಿ | 9600–14550 | 12,350.00 | 01 | 01 | 1,48,200.00 |
| 18. | ಕಾವಲುಗಾರರು | ಡಿ | 9600–14550 | 12,350.00 | 04 | 04 | 5,92,800.00 |
| 19. | 'ಡಿ' ಗ್ರೂಪ್ | ಡಿ | 9600–14550 | 12,350.00 | 08 | 08 | 11,85,600.00 |
| 20. | ವಿನ್ಯಾಸ ಕಲಾವಿದರು | ಡಿ | 9600–14550 | 12,350.00 | 01 | 01 | 1,60,200.00 |
| | ಒಟ್ಟು | | | | | **41** | **99,88,968.00** |

| ಕ್ರ.ಸಂ. | ಹುದ್ದೆಗಳ ವಿವರ | ಒಟ್ಟು ಹುದ್ದೆಗಳು | ಅಂದಾಜು ವಾರ್ಷಿಕ ವೇತನ |
|---|---|---|---|
| 01. | ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು | **20** | **1,51,14,600.00** |
| 02. | ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು | **05** | **40,45,464.00** |
| 03. | ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಗಳು | **10** | **32,88,000.00** |
| 04. | ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು | **41** | **99,88,968.00** |
| | ಒಟ್ಟು | **76** | **3,24,37,032.00** |

ನಿರ್ಣಯ: **ದಿನಾಂಕ: 16.06.2012ರಂದು ಬೆಳಿಗ್ಗೆ ನಡೆದ 'ಹಣಕಾಸು ಸಮಿತಿ' ಸಭೆಯ ಎಲ್ಲ ವಿವರಗಳನ್ನು ಪ್ರಶಾಸನ ಸಮಿತಿ ಸಭೆಯು ಪರಿಶೀಲಿಸಿತು. ವೃಂದ ಮತ್ತು ನೇಮಕಾತಿಯನ್ನು ನಿರ್ಬಂಧಿಸುವ ಅನುಶಾಸನವು ದಿನಾಂಕ: 14.05.2012ರಂದು ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆದಿದ್ದು, ಕರ್ನಾಟಕ ಸರ್ಕಾರದ ಸಂಖ್ಯೆ: ಇಡಿ 213 ಯುಆರ್‌ಸಿ 2011, ದಿನಾಂಕ: 25.05.2012ರಂದು ಅನುಮೋದಿತಗೊಂಡ ಪರಿನಿಯಮ ವಿಶ್ವವಿದ್ಯಾಲಯಕ್ಕೆ ಬಂದಿರುವುದನ್ನು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಆಡಳಿತಾಂಗ, ಪ್ರಸಾರಾಂಗ, ಅಧ್ಯಯನಾಂಗ ಹಾಗೂ ವಿವಿಧ ವಿಭಾಗಗಳಿಗೆ ನೇಮಕ ಮಾಡಿಕೊಳ್ಳಬಹುದಾದ ಹುದ್ದೆಗಳ ಬಗೆಗೆ ಮಾನ್ಯ ಅಧ್ಯಕ್ಷರು ವಿವರವಾಗಿ ಸಭೆಯ ಮುಂದೆ ಮಂಡಿಸಿದರು. ಯುಜಿಸಿ ವೇತನಶ್ರೇಣಿಯ 20 ಬೋಧಕ ಹುದ್ದೆಗಳಲ್ಲಿ ಮಂಜೂರಾದ ಪ್ರಾಧ್ಯಾಪಕ ಹುದ್ದೆ 10ರಲ್ಲಿ ಮೂರು ವಿಭಾಗಗಳನ್ನು ಮೊದಲು ತೆರೆಯುವ ಉದ್ದೇಶದಿಂದ 03 ಪ್ರಾಧ್ಯಾಪಕ ಹುದ್ದೆಗಳು ಅವಶ್ಯವೆಂದು, ಉಳಿದಂತೆ 06 ಸಹ ಪ್ರಾಧ್ಯಾಪಕ ಹುದ್ದೆಗಳು, 12 ಸಹಾಯಕ ಪ್ರಾಧ್ಯಾಪಕ ಹುದ್ದೆಗಳು ಒಂದೊಂದು ವಿಭಾಗಗಳಲ್ಲಿ ಯುಜಿಸಿ ನಿಯಮಗಳನ್ವಯ ಅಗತ್ಯವಿರುವುದನ್ನು ಅಧ್ಯಕ್ಷರು ಸಭೆಗೆ ಮನವರಿಕೆ ಮಾಡಿಕೊಟ್ಟರು. ಈ ಎಲ್ಲಾ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿರ್ಬಂಧಿಸುವ ಅನುಶಾಸನದ ಪ್ರಕಾರ ನೇರ ನೇಮಕಾತಿ ಮೂಲಕ ತುಂಬಿಕೊಳ್ಳುವ ಅವಕಾಶವಿರುವುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಲ್ಲಿ ಗ್ರಂಥಪಾಲಕ, ಉಪ ಗ್ರಂಥಪಾಲಕ ಹಾಗೂ ಸಹಾಯಕ ಗ್ರಂಥಪಾಲಕ ಹುದ್ದೆಗಳಲ್ಲಿ ತಲಾ ಒಂದೊಂದು ಹುದ್ದೆಗಳನ್ನು ಮಾತ್ರ ಸದ್ಯ ಭರ್ತಿ ಮಾಡಿಕೊಳ್ಳಲು ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಸೂಚಿಸಿರುವುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಈ ಅಂಶಗಳಿಗೆ ಸಭೆಯು ಒಪ್ಪಿತು. ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಗಳಲ್ಲಿ 26 ಹುದ್ದೆಗಳು ಮಂಜೂರಾಗಿದ್ದು, ವಿವಿಧ ವಿಭಾಗಗಳು ತೆಗೆದುಕೊಳ್ಳುವ ಸಂಶೋಧನಾ ಯೋಜನೆ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಅನುಸಾರವಾಗಿ 10 ಹುದ್ದೆಗಳನ್ನು ಮಾತ್ರ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಶಾಸನದಲ್ಲಿ ಅವಕಾಶವಿರುವುದನ್ನು ಸಭೆಯ ಗಮನಕ್ಕೆ ಅಧ್ಯಕ್ಷರು ತಂದರು. ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಲ್ಲಿ, ಈಗಾಗಲೇ 30 ಸಂಸ್ಕೃತ ಕಾಲೇಜುಗಳಲ್ಲಿ ಬಿ.ಎ. ಮತ್ತು ಎಂ.ಎ. ಪದವಿಗಳಿಗೆ ತತ್ಸಮಾನವಾದ ಪದವಿಗಳಿಗಾಗಿ ಪ್ರತಿವರ್ಷ ಆರು ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದು, ಅವುಗಳನ್ನು ಸರ್ವಸಮರ್ಪಕವಾಗಿ ಪರೀಕ್ಷಾಕಾರ್ಯಗಳನ್ನು ನಿರ್ವಹಿಸಲು ಮತ್ತು ಆಡಳಿತಾಂಗಕ್ಕೆ ನೆರವಾಗಲು ಉಪಕುಲಸಚಿವ ಹುದ್ದೆಯ ಅಗತ್ಯವಿರುವುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಅದರಂತೆ ಪ್ರಸಾರಾಂಗ ಮತ್ತು ಅಧ್ಯಯನಾಂಗಗಳ ಒಟ್ಟು ಶೈಕ್ಷಣಿಕ**

ಚಟುವಟಿಕೆಗಳಿಗೆ ಪೂರಕವಾಗಿರುವಂತೆ 02 ಉಪನಿರ್ದೇಶಕ ಹುದ್ದೆಗಳಲ್ಲಿ ಸದ್ಯ 01 ಉಪನಿರ್ದೇಶಕ ಹುದ್ದೆಯನ್ನು ತುಂಬಿಕೊಳ್ಳಲು ಸಭೆಯು ಸೂಚಿಸಿತು. ಇವು ಸಹಾಯಕ ಕುಲಸಚಿವರ ವೃಂದದಿಂದ ಬಡ್ತಿ ಮೇಲೆ – ಬಡ್ತಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ನೇರ ನೇಮಕಾತಿ ಮೂಲಕ ತುಂಬಲು ಅನುಶಾಸನದಲ್ಲಿ ಅವಕಾಶವಿರುವುದನ್ನು ಸಭೆಯ ಗಮನಕ್ಕೆ ಅಧ್ಯಕ್ಷರು ತಂದರು. ಈಗಾಗಲೇ ನಿಯೋಜನೆಯಿಂದ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕುಲಸಚಿವರು ಮತ್ತು ಸಹಾಯಕ ನಿರ್ದೇಶಕರು –ಇವುಗಳಲ್ಲಿ ಒಂದೊಂದು ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳಲು ಸಭೆ ಒಪ್ಪಿತು. ಈ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವುದು ಅವಶ್ಯವೆಂದು ಸಭೆಯು ಅಭಿಪ್ರಾಯಪಟ್ಟಿತು. ಶಾಖಾಧಿಕಾರಿ ಹಾಗೂ ಕಂಪ್ಯೂಟರ್ ಆಪರೇಟರ್ ಹುದ್ದೆಗಳು ತಲಾ ಒಂದೊಂದು ಹುದ್ದೆಗಳು ಮಂಜೂರಾಗಿದ್ದು, ಅವು ವಿಶ್ವವಿದ್ಯಾಲಯದ ಆಡಳಿತಾಂಗಕ್ಕೆ ತುಂಬಾ ತುರ್ತಾಗಿ ಅಗತ್ಯವಿರುವುದನ್ನು ಅಧ್ಯಕ್ಷರು ಸಭೆಗೆ ಮನವರಿಕೆ ಮಾಡಿಕೊಟ್ಟರು. ಮಂಜೂರಾತಿಗೊಂಡಿರುವ 03 ಸಹಾಯಕ ಹುದ್ದೆಗಳಲ್ಲಿ ಶೇ. 50ರಷ್ಟು ನೇರ ನೇಮಕಾತಿ ಮೂಲಕ ತುಂಬಿಕೊಳ್ಳಲು ಅವಕಾಶವಿರುವುದರಿಂದ 01 ಹುದ್ದೆಯನ್ನು ಮಾತ್ರ ಭರ್ತಿ ಮಾಡಿಕೊಳ್ಳುವುದೆಂದೂ ಗ್ರಂಥಾಲಯ ಸಹಾಯಕ 02 ಹುದ್ದೆಗಳಲ್ಲಿ 01 ಹುದ್ದೆಯನ್ನು ಮಾತ್ರ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವುದೆಂದೂ ಸಭೆಯು ಸೂಚಿಸಿತು. ಈಗಾಗಲೇ ವಿಶ್ವವಿದ್ಯಾಲಯದಲ್ಲಿ ಕುಲಪತಿ ಹಾಗೂ ಕುಲಸಚಿವರಿಗೆ ಒಂದೊಂದು ವಾಹನವಿದ್ದು, 02 ವಾಹನ ಚಾಲಕ ಹುದ್ದೆಗಳು ಅನುಶಾಸನದ ಪ್ರಕಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅವಕಾಶವಿರುವುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಹೊರಗುತ್ತಿಗೆಯ ಮೇಲೆ ಕಾರ್ಯನಿರ್ವಹಿಸುವುದು ಉಚಿತವೆಂದು ಸೂಚಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. ಆದರೆ, ಈ ಹುದ್ದೆಗಳು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ, ಸುಗಮ ಕಾರ್ಯನಿರ್ವಹಣೆಯ ದೃಷ್ಟಿಯಿಂದ ಅತ್ಯಂತ ಅವಶ್ಯವೆಂದು ಸಭೆಯು ಸೂಚಿಸಿತು. ಕಿರಿಯ ಸಹಾಯಕ 04 ಹುದ್ದೆಗಳಲ್ಲಿ ಶೇಕಡಾ 75ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವ ಅವಕಾಶವಿದ್ದು, ಸದ್ಯ 02 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳಬಹುದೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು. ಇನ್ನುಳಿದಂತೆ ಟೆಲಿಫೋನ್ ಆಪರೇಟರ್–02 ಹುದ್ದೆಗಳಲ್ಲಿ 01 ಹುದ್ದೆಯನ್ನು ತುಂಬಿಕೊಳ್ಳಲು ಸಭೆಯು ಒಪ್ಪಿತು. ವಿಶ್ರಾಂತಿಗೃಹ ಮೇಲ್ವಿಚಾರಕರು 02 ಹುದ್ದೆಗಳು ಮಂಜೂರಾಗಿದ್ದು ಸದ್ಯ 01 ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವುದು ಅವಶ್ಯವೆಂದು ಸಭೆ ಸೂಚಿಸಿತು. ಅಡಿಗೆ ಸಹಾಯಕರು–01, ಕಾವಲುಗಾರರು–04, ಡಿ ಗ್ರೂಪ್ ನೌಕರರು–08 ಅನುಶಾಸನದ ಪ್ರಕಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅವಕಾಶವಿರುವುದನ್ನು ಹಾಗೂ ಈ ಎಲ್ಲಾ ಹುದ್ದೆಗಳು ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯ ದೃಷ್ಟಿಯಿಂದ ಅವಶ್ಯವಿರುವುದನ್ನು ಸಭೆಯ ಗಮನಕ್ಕೆ ಅಧ್ಯಕ್ಷರು ತಂದರು. ಈ ಎಲ್ಲಾ ಅಂಶಗಳನ್ನು ಸುದೀರ್ಘವಾಗಿ ಸಭೆ ಚರ್ಚಿಸಿ ಅಂಗೀಕರಿಸಿತು.

ಈ ಎಲ್ಲಾ ಬೋಧಕ–ಬೋಧಕೇತರ ಹುದ್ದೆಗಳಿಗೆ ತಗಲುವ ವೇತನವನ್ನು ವಿಶ್ವವಿದ್ಯಾಲಯಕ್ಕೆ ಅಭಿವೃದ್ಧಿ ಅನುದಾನದಿಂದ ಲಭ್ಯವಾಗುವ ಮೊತ್ತದಿಂದ ಭರಿಸಲು ಸಭೆಯು ನಿರ್ಣಯಿಸಿತು. ಈ ಮೇಲ್ಕಂಡ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವಾಗ ಜಾರಿಯಲ್ಲಿರುವ ಯುಜಿಸಿ/ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳು, ಮೀಸಲಾತಿ ನಿಯಮಗಳು ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಭರ್ತಿ ಮಾಡಿಕೊಳ್ಳಲು ಸಭೆಯು ಸೂಚಿಸಿತು.

ಯುಜಿಸಿ ವೇತನಶ್ರೇಣಿಯ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಬೇಕಾದ ಸಮಸ್ತ ವಿವರಗಳ ಸಹಿತ ಮುಂದಿನ ಸಭೆಯಲ್ಲಿ ಮಂಡಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು. ರಾಜ್ಯ ವೇತನಶ್ರೇಣಿಯ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಭರ್ತಿ ಮಾಡಿಕೊಳ್ಳಲು ಸಭೆಯ ಒಪ್ಪಿಗೆಯನ್ನು ಮಾನ್ಯ ಅಧ್ಯಕ್ಷರು ಕೇಳಿದರು. ಈ ಅಂಶಕ್ಕೆ ಸಭೆಯು ಸಂಪೂರ್ಣ ಒಪ್ಪಿಗೆ ನೀಡಿತು.

| ಕ್ರ.ಸಂ. | ಹುದ್ದೆಗಳ ವಿವರ | ಒಟ್ಟು ಹುದ್ದೆಗಳು | ಅಂದಾಜು ವಾರ್ಷಿಕ ವೇತನ |
|---|---|---|---|
| 01. | ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು | 21 | 1,50,04,008.00 |
| 02. | ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು | 03 | 25,44,984.00 |
| 03. | ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಗಳು | 10 | 32,88,000.00 |
| 04. | ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು | 27 | 61,58,256.00 |
| | ಒಟ್ಟು | 61 | 2,69,95,248.00 |

ಮೇಲ್ಕಂಡ ಎಲ್ಲ 61 ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯವಿರುವ ಅಂಶಗಳನ್ನು ಮಾನ್ಯ ಅಧ್ಯಕ್ಷರು ವಿವರವಾಗಿ ಸಭೆಯ ಗಮನಕ್ಕೆ ತಂದರು. ಈ ಕೆಳಕಂಡ ಅಂಶಗಳ ಹಿನ್ನೆಲೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

1. ಹೊಸದಾಗಿ ಅಸ್ತಿತ್ವಕ್ಕೆ ಬರುತ್ತಿರುವ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳಿಗೆ ಅನುಗುಣವಾಗಿ ಮೇಲ್ಕಂಡ ಎಲ್ಲ ಹುದ್ದೆಗಳು ಅಗತ್ಯವಿರುವುದನ್ನು ಸಭೆಯು ಮನಗಂಡಿತು.
2. ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾಲಯದ ನೂತನ ಆವರಣವು ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರದಲ್ಲಿ ಪ್ರಾರಂಭವಾಗುತ್ತಿದೆ. ಇದು ಬೆಂಗಳೂರಿನಿಂದ 48 ಕಿ.ಮೀ. ದೂರದಲ್ಲಿದ್ದು, ಸುತ್ತಮುತ್ತ 10 ಕಿ.ಮೀ. ವಿಸ್ತೀರ್ಣದಲ್ಲಿ ಯಾವುದೇ ವಸತಿ ವ್ಯವಸ್ಥೆಯಾಗಲೀ ಇತರೆ ವ್ಯವಸ್ಥೆಗಳಾಗಲೀ ಇರುವುದಿಲ್ಲ. ಆದುದರಿಂದ ಹೊರಗುತ್ತಿಗೆ ನೌಕರರ ಲಭ್ಯತೆ ಅಲ್ಲಿ ಸಾಧ್ಯವಿರುವುದಿಲ್ಲ. ಇದನ್ನು ಸಭೆಯು ಮನಗಂಡಿತು.
3. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಯುಜಿಸಿಯ 12ಬಿ ಸೇರಬೇಕಾದರೆ ಕನಿಷ್ಠ 5 ವಿಭಾಗಗಳಾದರೂ ಅಸ್ತಿತ್ವದಲ್ಲಿರಬೇಕು. ಇಲ್ಲದಿದ್ದರೆ 12ಬಿ ಮಾನ್ಯತೆ ಸಿಗುವುದು ಸಾಧ್ಯವಿಲ್ಲ. ಆದುದರಿಂದ 2012–13ನೇ ಸಾಲಿನಲ್ಲಿ 3 ವಿಭಾಗಗಳನ್ನು ಮೊದಲು ಅಸ್ತಿತ್ವಕ್ಕೆ ತಂದು, ಅನಂತರ ಉಳಿದ ವಿಭಾಗಗಳನ್ನು 2013–14ನೇ ಸಾಲಿನಲ್ಲಿ ಅಸ್ತಿತ್ವಕ್ಕೆ ತಂದು '12ಬಿ' ಮಾನ್ಯತೆಗೆ ಅವಕಾಶ ಪಡೆಯುವುದು ಅಗತ್ಯವಿರುವುದನ್ನು ಸಭೆಯು ಮನಗಂಡಿತು.
4. ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಆವರಣವು ಸಿಟಿ ಕ್ಯಾಂಪಸ್ ಆಗಿ ಕಾರ್ಯಪ್ರಕಲ್ಪವನ್ನು ಆಂಶಿಕವಾಗಿ ಕಾರ್ಯನಿರ್ವಹಿಸುತ್ತಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.

5. **ವಿಶ್ವವಿದ್ಯಾಲಯವು ಬೇರೆ ಬೇರೆ ವಿಶ್ವವಿದ್ಯಾಲಯಗಳ ಜೊತೆ ಹೊಸದಾಗಿ ಯೋಜನೆಗಳನ್ನು ಹಮ್ಮಿಕೊಳ್ಳುವುದು, ಸ್ವತಃ ಪ್ರಸಾರಾಂಗದ ಮೂಲಕ ಹೊಸ ಸಾಂಸ್ಥಿಕ, ವೈಭಾಗಿಕ ಹಾಗೂ ಬಾಹ್ಯ ಯೋಜನೆಗಳನ್ನು ರೂಪಿಸಿಕೊಳ್ಳುವುದು, ಎಂ.ಫಿಲ್. ಮತ್ತು ಪಿಎಚ್.ಡಿ. ಅಧ್ಯಯನಗಳಿಗೆ ಅವಕಾಶ ಮಾಡಿಕೊಡುವುದು –ಈ ಎಲ್ಲಾ ಪ್ರಕ್ರಿಯೆಗಳಿಗೆ ಹುದ್ದೆಗಳ ಅವಶ್ಯಕತೆ ಇರುವುದನ್ನು ಸಭೆಯು ಗಮನಿಸಿತು.**
6. **ಮಂಜೂರಾಗಿರುವ ಒಟ್ಟು ಹುದ್ದೆಗಳಲ್ಲಿ ಶೇ. 46ರಷ್ಟು ಮಾತ್ರ 2012–13ರ ಸಾಲಿನಲ್ಲಿ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಅವಶ್ಯವಿದೆ ಎಂಬುದನ್ನು ಸಭೆಯು ಗಮನಿಸಿತು.**

**ವಿಷಯ 4: 2012–13ರ ಸಾಲಿನಿಂದ ನಡೆಯುವ ಎಂ.ಫಿಲ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವಾಗಿ ಮಾಸಿಕ 1000/– ರೂ.ಗಳನ್ನು ಜುಲೈ ತಿಂಗಳಿನಿಂದ ನೀಡುವ ಬಗೆಗೆ.**

ಟಿಪ್ಪಣಿ: 2012–13ನೇ ಸಾಲಿನಿಂದ ಎಂ.ಫಿಲ್ ಪದವಿ ಅಧ್ಯಯನವನ್ನು ಪ್ರಾರಂಭಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ದಿನಾಂಕ: 31.04.2012ರಂದು ಅಧಿಸೂಚನೆಯನ್ನು ಹೊರಡಿಸಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು 31.05.2012ಕ್ಕೆ ನಿಗದಿಗೊಳಿಸಲಾಗಿತ್ತು. ಆದರೆ, ಈ ಅವಧಿಯು ಬೇಸಿಗೆ ರಜೆಯಾಗಿದ್ದು, ವಿದ್ಯಾರ್ಥಿಗಳಿಗೆ ಮಾಹಿತಿ ದೊರಕಿರದ ಹಿನ್ನೆಲೆಯಲ್ಲಿ ಈ ದಿನಾಂಕವನ್ನು 18.06.2012ಕ್ಕೆ ವಿಸ್ತರಿಸಲಾಗಿದೆ. ದಿನಾಂಕ: 25.06.2012ರಂದು ಪ್ರವೇಶ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆಗಳು ನಡೆಯಲಿವೆ. ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ಜುಲೈ ತಿಂಗಳಿನಿಂದ ಎಂ.ಫಿಲ್ ತರಗತಿಗಳನ್ನು ಆರಂಭಿಸಲಾಗುತ್ತಿದೆ. ಎಂ.ಫಿಲ್. ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಾಸಿಕ ತಲಾ ರೂ. 1000/–ಗಳನ್ನು ಪ್ರೋತ್ಸಾಹಧನವನ್ನು ನೀಡಬಹುದಾಗಿದೆ. ವಾರ್ಷಿಕ 3.60 ಲಕ್ಷ ರೂ.ಗಳು ಆಗಲಿದ್ದು, ಇದನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಹಣದಲ್ಲಿ ಭರಿಸಬಹುದಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಎಂ.ಫಿಲ್. ಅಧ್ಯಯನ ಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಮಾಸಿಕ ರೂ. 1000/–ಗಳನ್ನು ಪ್ರೋತ್ಸಾಹಧನವಾಗಿ ನೀಡುವುದಕ್ಕೆ ಸಭೆಯು ತನ್ನ ಒಪ್ಪಿಗೆಯನ್ನು ಸೂಚಿಸಿತು. ಈ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಲಭ್ಯವಿರುವ ವಿದ್ಯಾರ್ಥಿವೇತನ ಹಾಗೂ ಅಭಿವೃದ್ಧಿ ಅನುದಾನದ ಸಂಪನ್ಮೂಲದಿಂದ ಪಾವತಿಸಬಹುದೆಂದು ಸಭೆಯು ನಿರ್ಣಯಿಸಿತು.**

**ವಿಷಯ 5: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಹುದ್ದೆಗಳನ್ನು ತುಂಬುವ ಬಗೆಗೆ.**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಆಡಳಿತಾತ್ಮಕ ಕಾರ್ಯನಿರ್ವಹಣೆಗಾಗಿ ಸರ್ಕಾರಿ ಆದೇಶ ಸಂಖ್ಯೆ: ಇಡಿ 218 ಯುಆರ್‌ಸಿ 2010, ದಿನಾಂಕ: 15.06.2011ರಲ್ಲಿ ತಾತ್ಕಾಲಿಕವಾಗಿ ಒಟ್ಟು 24 ಹುದ್ದೆಗಳನ್ನು ಸೃಜಿಸಲು ಅನುಮತಿಯನ್ನು ನೀಡಿದೆ. ಈ 24 ಹುದ್ದೆಗಳಲ್ಲಿ 20 ಹುದ್ದೆಗಳು ನಿಯೋಜನೆಯ ಮೂಲಕ ಕಾರ್ಯನಿರ್ವಹಣೆ ಮಾಡಲಾಗುವುದು. ಉಳಿದ 4 ಕಿರಿಯ ಸಹಾಯಕರು ಹುದ್ದೆಗಳನ್ನು ನೇಮಕಾತಿ/ನಿಯೋಜನೆ ಮೂಲಕ ತುಂಬಿಕೊಳ್ಳಲು ಸೂಚಿಸಿದೆ. ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳ ಅನುಸಾರ 4 ಕಿರಿಯ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಬೇಕಾಗಿದೆ. ಒಟ್ಟು ವಾರ್ಷಿಕ ವೆಚ್ಚ **ರೂ. 7,12,800/–ಗಳು** ಆಗುತ್ತದೆ. ಈ ಮೊತ್ತವನ್ನು 2012–13ನೇ ಸಾಲಿನ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನದಲ್ಲಿ ಭರಿಸಬಹುದಾಗಿದೆ. ಸಭೆಯ ಅನುಮತಿಗಾಗಿ ಮಂಡಿಸಿದೆ.

ನಿರ್ಣಯ: **ದಿನಾಂಕ: 16.06.2012ರ ಬೆಳಿಗ್ಗೆ ನಡೆದ 'ಹಣಕಾಸು ಸಮಿತಿ' ಕಾರ್ಯಸೂಚಿಯಲ್ಲಿ ಈ ವಿಷಯವು ಮಂಡಿತವಾಗಿದ್ದು, ಕರ್ನಾಟಕ ಸರ್ಕಾರದ ನಡಾವಳಿಯ ಅನ್ವಯ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಲು ಅನುಮತಿ ನೀಡಿ, ತಾತ್ಕಾಲಿಕವಾಗಿ ಹುದ್ದೆಗಳನ್ನು ಸೃಜಿಸಲು ಸರ್ಕಾರ ಅನುಮತಿ ನೀಡಿರುವುದನ್ನು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಈಗಿರುವಂತೆ ನಿರ್ದೇಶನಾಲಯಕ್ಕೆ ಬೇಕಾಗುವ ಎಲ್ಲಾ 24 ಹುದ್ದೆಗಳು ಅಗತ್ಯವಿದ್ದು, ಇವುಗಳನ್ನು ಖಾಯಂ ಆಗಿ ಸೃಜಿಸಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸಲು ಮಾನ್ಯ ಸದಸ್ಯರೆಲ್ಲರೂ ಒಮ್ಮತದಿಂದ ಸೂಚಿಸಿದರು. ಆದಷ್ಟೂ ಬೇಗ ಎಲ್ಲಾ ಹುದ್ದೆಗಳನ್ನು ಖಾಯಂ ಆಗಿ ಸೃಜಿಸಿ ನೇಮಕ ಮಾಡಿಕೊಳ್ಳುವುದು ಅವಶ್ಯವಿದೆ ಎಂದು ಸಭೆಯು ನಿರ್ಣಯಿಸಿತು.**

**ವಿಷಯ 6: 2013–14ರಿಂದ ದೂರಶಿಕ್ಷಣವನ್ನು ಆತ್ರೇಯ ಸಂಸ್ಥೆ ಮೂಲಕ ನಡೆಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ಭಾಷೆ–ಸಾಹಿತ್ಯ–ವಿಜ್ಞಾನಗಳ ಅಧ್ಯಯನ ಸಂಶೋಧನೆ ಪ್ರಸಾರಗಳಿಗೆ ಉತ್ತೇಜನ ನೀಡುವ ಉದ್ದೇಶ್ಯದಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸ್ಥಾಪಿತವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ರಾಜ್ಯದಲ್ಲಿರುವ ಪಾರಂಪರಿಕ ಶಾಸ್ತ್ರಾಧ್ಯಯನಕ್ಕೆ ಒಂದು ಸೂಕ್ತ ಕಾಯಕಲ್ಪ ಒದಗಿಸಲಾಗಿದೆ. ಇದಲ್ಲದೇ, ಸಂಸ್ಕೃತ ಭಾಷೆಯ ಅಧ್ಯಯನವನ್ನು ಶಾಸ್ತ್ರಾಧ್ಯಯನ ಕ್ಷೇತ್ರವಲ್ಲದೇ ಜನಸಾಮಾನ್ಯ ಜಿಜ್ಞಾಸುಗಳಿಗೆ ವಿಸ್ತರಿಸುವ ಅವಶ್ಯಕತೆಯನ್ನು ಅಲ್ಲಗಳೆಯುವಂತಿಲ್ಲ. ಸಂಗೀತ, ನೃತ್ಯ, ರಂಗಭೂಮಿ, ಆಯುರ್ವೇದ, ಕಾನೂನು –ಮುಂತಾದ ಕ್ಷೇತ್ರಗಳಲ್ಲಿ ಅಧ್ಯಯನ–ಸಂಶೋಧನೆ ಕಾರ್ಯ ಕೈಗೊಂಡವರಿಗಾಗಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಸಂಸ್ಕೃತ ಪರಿಭಾಷೆಯ ಜ್ಞಾನವನ್ನು ನೀಡಲು ಪ್ರಮಾಣಿತ ತರಗತಿ ಮತ್ತು ಪ್ರಾಯೋಗಿಕ ತರಗತಿ (Certificate and Diploma Courses)ಗಳನ್ನು ಆರಂಭ ಮಾಡುವ ಉದ್ದೇಶ್ಯ ವಿಶ್ವವಿದ್ಯಾಲಯಕ್ಕಿದೆ.

ಪ್ರಸ್ತುತ ಈ ಕ್ಷೇತ್ರಗಳು ತುಂಬ ವಿಸ್ತೃತವಾಗಿ ವಿಕ್ಷಿಪ್ತವಾಗಿರುವುದರಿಂದ ವಿಶ್ವವಿದ್ಯಾಲಯದಿಂದ ನೇರವಾಗಿ ಈ ತರಗತಿಗಳ ಲಾಭವನ್ನು ಎಲ್ಲರಿಗೂ ತಲುಪಿಸಲು ಸಾಧ್ಯವಿಲ್ಲ. ರಾಜ್ಯಾದ್ಯಂತ ಅಧ್ಯಯನ ಕೇಂದ್ರಗಳ ಮೂಲಕ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಒಂದು ಮಧ್ಯವರ್ತಿ ಸಂಸ್ಥೆಯ ಮೂಲಕ ಈ ಶಿಕ್ಷಣ ಯೋಜನೆಯನ್ನು ಅನುಷ್ಠಾನಗೊಳಿಸಿರುವಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವೂ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದಾಗಿದೆ. ಈ ಯೋಜನೆಯಲ್ಲಿ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಅಷ್ಟೇ ಅಲ್ಲದೆ, ಹಂತ

ಹಂತಗಳಲ್ಲಿ ಹತ್ತಾರು ಸಹಸ್ರ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಅವಕಾಶ ನೀಡಿದಾಗ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಆದಾಯವೂ ಹೆಚ್ಚುತ್ತದೆ.

ಇಂದಿನ ಬದಲಾಗುತ್ತಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿಶ್ವವಿದ್ಯಾಲಯಗಳು ಜನತೆಯನ್ನು ತಲುಪಲು ಈ ತರಹದ ಖಾಸಗಿ ಹಾಗೂ ಸಾರ್ವಜನಿಕ ಸಂಸ್ಥೆಗಳ ಸಹಯೋಗ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಆತ್ರೇಯ ಎಂಬ ಸಂಸ್ಥೆಯು ವಿಶ್ವವಿದ್ಯಾಲಯಕ್ಕೆ ಈ ನಿಟ್ಟಿನಲ್ಲಿ ಮಾಧ್ಯಮ ಸಂಸ್ಥೆಯಾಗಿ ಸಹಯೋಗ ನೀಡಲು ಸೂಕ್ತವಾದ ಪ್ರಸ್ತಾವನೆಯನ್ನು ಸಲ್ಲಿಸಿದೆ. ಈ ಸಂಸ್ಥೆಯು ಈಗಾಗಲೇ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದು, ಈ ಕ್ಷೇತ್ರದಲ್ಲಿ ಸಾಕಷ್ಟು ಅನುಭವಿಗಳಾದ ನಿರ್ದೇಶಕ ಪಡೆಯ ಬೆಂಬಲ ಪಡೆದಿದೆ. ಈ ಸಂಸ್ಥೆಯ ಪ್ರಸ್ತಾವನೆಯನ್ನು ಒಪ್ಪಿಕೊಂಡು ವಿಶ್ವವಿದ್ಯಾಲಯವು ಒಂದು ಒಪ್ಪಂದವನ್ನು ಮಾಡಿಕೊಳ್ಳುವ ಸಂಬಂಧದಲ್ಲಿ ಸಭೆಯ ಅನುಮೋದನೆಗೆ ಪ್ರಸ್ತಾವನೆಯನ್ನು ಇರಿಸಲಾಗಿದೆ.

ನಿರ್ಣಯ: **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದೊಡನೆ 2013-14ನೇ ಶೈಕ್ಷಣಿಕ ಸಾಲಿನಿಂದ ದೂರಶಿಕ್ಷಣವನ್ನು ನಡೆಸಲು ಆತ್ರೇಯ ಸಂಸ್ಥೆಯವರು ಸಲ್ಲಿಸಿದ ಪ್ರಸ್ತಾವನೆಯ ಬಗೆಗೆ ಪ್ರಶಾಸನ ಸಮಿತಿ ಸಭೆಯು ಕೂಲಂಕಷ ಚರ್ಚೆ ನಡೆಸಿತು. ಇದಕ್ಕೂ ಮೊದಲು ಆತ್ರೇಯ ಸಂಸ್ಥೆಯ ಪ್ರತಿನಿಧಿಗಳು ದೂರಶಿಕ್ಷಣದ ಮಹತ್ವ, ದೂರಶಿಕ್ಷಣದ ಕಾರ್ಯಕ್ರಮದಿಂದ ಸಂಸ್ಕೃತಕ್ಕೆ ಆಗುವ ಲಾಭ, ಮುಂತಾದ ವಿಷಯಗಳನ್ನೊಳಗೊಂಡ ಒಂದು ಸುದೀರ್ಘ ಪ್ರಸ್ತಾವನೆಯನ್ನು ಮಂಡಿಸಿದರು. ಚರ್ಚೆಯಲ್ಲಿ ಪ್ರಶಾಸನ ಸಮಿತಿಯ ಮಾನ್ಯ ಸದಸ್ಯರುಗಳು ಆತ್ರೇಯ ಸಂಸ್ಥೆಗೆ ಸಂಸ್ಕೃತ ಶಿಕ್ಷಣವನ್ನು ದೂರಶಿಕ್ಷಣ ಮಟ್ಟದಲ್ಲಿ ನಡೆಸಲು ಇರುವ ಆರ್ಥಿಕ ಮತ್ತು ಶೈಕ್ಷಣಿಕ ಸಾಮರ್ಥ್ಯವನ್ನು ಹಾಗೂ ಸಂಸ್ಥೆಗಿರುವ ಬದ್ಧತೆಯ ಬಗ್ಗೆ ವಿಸ್ತೃತ ಚರ್ಚೆ ನಡೆಸಿದರು. ಈ ಸಂಬಂಧವಾಗಿ ಮಾನ್ಯ ಅಧ್ಯಕ್ಷರು, ವಿಶ್ವವಿದ್ಯಾಲಯದ ಘನತೆ ಮತ್ತು ಅದಕ್ಕಿರುವ ಬದ್ಧತೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಅಂಶಗಳ ಬಗ್ಗೆ ಕೂಲಂಕಷ ಅಧ್ಯಯನ ಮಾಡಲು ಪ್ರಶಾಸನ ಸಮಿತಿ, ಪ್ರಶಿಕ್ಷಣ ಪರಿಷತ್ತು ಮತ್ತು ಶಿಕ್ಷಣ ತಜ್ಞರನ್ನೊಳಗೊಂಡ ಸಮಿತಿಯೊಂದನ್ನು ರಚಿಸಿ, ಸಮಗ್ರ ವರದಿ ಪಡೆದು, ಅನಂತರ ಕ್ರಮಕೈಗೊಳ್ಳಲಾಗುವುದು ಮತ್ತು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ಮೇಲೂ ಮೇಲ್ವಿಚಾರಣಾ ಸಮಿತಿಯು ಎಲ್ಲಾ ಹಂತಗಳಲ್ಲೂ ಆತ್ರೇಯ ಸಂಸ್ಥೆಯ ಜೊತೆಗೂಡಿ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳು ವಿಶ್ವವಿದ್ಯಾಲಯದ ದೂರದೃಷ್ಟಿಗೆ ಅನುಗುಣವಾಗಿ ಕೆಲಸ ಮಾಡುವ ರೀತಿಯಲ್ಲಿ ಸಲಹೆ-ಸಹಕಾರಗಳನ್ನು ನೀಡುತ್ತದೆ ಎಂದು ಸಭೆಗೆ ತಿಳಿಸಿದರು. ನಂತರ ಸಭೆಯು ಸದರಿ ಸಂಸ್ಥೆಯ ಜೊತೆ ಒಡಂಬಡಿಕೆ ಮಾಡಿಕೊಳ್ಳಲು ಶೈಕ್ಷಣಿಕ ಕಾರ್ಯಗಳನ್ನು ನಡೆಸಲು ಸಮ್ಮತಿ ನೀಡಿ ನಿರ್ಣಯಿಸಿತು.**

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:

**ವಿಷಯ 1: ದಿನಾಂಕ: 16.06.2012ರಂದು ನಡೆದ ಹಣಕಾಸು ಸಮಿತಿ ಐದನೇ ಸಭೆಯ ನಡಾವಳಿ ಅನುಮೋದನೆ ಬಗೆಗೆ.**

ಟಿಪ್ಪಣಿ: ಹಣಕಾಸು ಸಮಿತಿಯ ಐದನೇ ಸಭೆಯು ದಿನಾಂಕ: 16.06.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಪ್ರಶಾಸನ ಸಮಿತಿ ಸಭೆಯ ನಡಾವಳಿ ವಿಷಯ ಸಂಖ್ಯೆ 3ರಲ್ಲಿ ಈಗಾಗಲೇ ಚರ್ಚಿಸಿ ನಿರ್ಣಯಿಸಿರುವ ಅಂಶವನ್ನೇ ಕ್ರಮವಿಡುವುದೆಂದೂ ಹಣಕಾಸು ಸಮಿತಿಯಲ್ಲಿ ಸೂಚಿತವಾಗಿರುವ ಬೋಧಕ-ಬೋಧಕೇತರ ಹುದ್ದೆಗಳ ಒಟ್ಟು ಪಟ್ಟಿಗೆ ಸಭೆಯು ತನ್ನ ಅನುಮೋದನೆಯನ್ನು ತಾತ್ತ್ವಿಕವಾಗಿ ಅಂಗೀಕರಿಸಿತು.**

| ಕ್ರ. ಸಂ. | ಪದನಾಮ | ಶ್ರೇಣಿ | ವೇತನಶ್ರೇಣಿ | ಮಾಸಿಕ ವೇತನ | ಮಂಜೂರು ಆದ ಹುದ್ದೆಗಳು | ಭರ್ತಿ ಮಾಡಿಕೊಳ್ಳುವ ಹುದ್ದೆಗಳು | ವಾರ್ಷಿಕ ವೇತನ (ಮಾಸಿಕ ವೇತನ x ಹುದ್ದೆಗಳು) |
|---|---|---|---|---|---|---|---|
| **I ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು** | | | | | | | |
| 01. | ಪ್ರಾಧ್ಯಾಪಕರು | ಎ | 37400-67400+AGP | 87,042.00 | 10 | 03 | 31,33,512.00 |
| 02. | ಸಹಪ್ರಾಧ್ಯಾಪಕರು | ಎ | 37400-67400+ AGP | 85,212.00 | 15 | 06 | 61,35,264.00 |
| 03. | ಸಹಾಯಕ ಪ್ರಾಧ್ಯಾಪಕರು | ಎ | 15600-39100+ AGP | 39,828.00 | 20 | 12 | 57,35,232.00 |
| | ಒಟ್ಟು | | | | | **21** | **1,50,04,008.00** |
| **II ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು** | | | | | | | |
| 01. | ಗ್ರಂಥಪಾಲಕ | ಎ | 37400-67400+AGP | 87,042.00 | 01 | 01 | 10,44,504.00 |
| 02. | ಉಪ ಗ್ರಂಥಪಾಲಕ | ಎ | 37400-67400+AGP | 85,212.00 | 02 | 01 | 10,22,544.00 |
| 03. | ಸಹಾಯಕ ಗ್ರಂಥಪಾಲಕ | ಎ | 15600-39100+ AGP | 39,828.00 | 03 | 01 | 4,77,936.00 |
| | ಒಟ್ಟು | | | | | **03** | **25,44,984.00** |
| **III ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಗಳು** | | | | | | | |
| 01. | ಯೋಜನಾ ಸಹಾಯಕರು | ಬಿ | 21600-40050 | 27,400.00 | 26 | 10 | 32,88,000.00 |
| | ಒಟ್ಟು | | | | | **10** | **32,88,000.00** |
| **IV ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು** | | | | | | | |
| 01. | ಉಪ ಕುಲಸಚಿವರು | ಎ | 40050-56550 | 50,463.00 | 01 | 01 | 6,05,556.00 |
| 02. | ಉಪ ನಿರ್ದೇಶಕರು | ಎ | 36300-53850 | 45,775.00 | 02 | 01 | 5,49,300.00 |
| 03. | ಸಹಾಯಕ ಕುಲಸಚಿವರು | ಎ | 28100-50100 | 35,525.00 | 02 | 01 | 4,26,300.00 |
| 04. | ಸಹಾಯಕ ನಿರ್ದೇಶಕರು | ಎ | 28100-50100 | 35,525.00 | 02 | 01 | 4,26,300.00 |

| | | | | | | | |
|---|---|---|---|---|---|---|---|
| 05. | ಶಾಖಾಧಿಕಾರಿ | ಬಿ | 21600–40050 | 27,400.00 | 01 | 01 | 3,28,800.00 |
| 06. | ಕಂಪ್ಯೂಟರ್ ಆಪರೇಟರ್ | ಬಿ | 21600–40050 | 27,400.00 | 01 | 01 | 3,28,800.00 |
| 07. | ಸಹಾಯಕರು | ಸಿ | 16000–29600 | 20,350.00 | 03 | 01 | 2,44,200.00 |
| 08. | ಗ್ರಂಥಾಲಯ ಸಹಾಯಕರು | ಸಿ | 16000–29600 | 20,350.00 | 02 | 01 | 2,44,200.00 |
| 09. | ವಾಹನ ಚಾಲಕರು | ಸಿ | 12500–24000 | 15,975.00 | 02 | 02 | 3,83,400.00 |
| 10. | ಕಿರಿಯ ಸಹಾಯಕರು | ಸಿ | 11600–21000 | 14,850.00 | 04 | 02 | 3,56,400.00 |
| 11. | ಟೆಲಿಫೋನ್ ಆಪರೇಟರ್ | ಸಿ | 11600–21000 | 14,850.00 | 02 | 01 | 1,78,200.00 |
| 12. | ವಿಶ್ರಾಂತಿಗೃಹ ಮೇಲ್ವಿಚಾರಕರು | ಡಿ | 10400–16400 | 13,350.00 | 02 | 01 | 1,60,200.00 |
| 13. | ಅಡಿಗೆ ಸಹಾಯಕರು | ಡಿ | 9600–14550 | 12,350.00 | 01 | 01 | 1,48,200.00 |
| 14. | ಕಾವಲುಗಾರರು | ಡಿ | 9600–14550 | 12,350.00 | 04 | 04 | 5,92,800.00 |
| 15. | 'ಡಿ' ಗ್ರೂಪ್ | ಡಿ | 9600–14550 | 12,350.00 | 08 | 08 | 11,85,600.00 |
| | | | ಒಟ್ಟು | | | **27** | **61,58,256.00** |

**ವಿಷಯ 2: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ವಿಶ್ವವಿದ್ಯಾಲಯದಲ್ಲಿ ತಮ್ಮ ಸೇವೆಯನ್ನು ವಿಲೀನಗೊಳಿಸುವ ಬಗೆಗೆ.**

ಟಿಪ್ಪಣಿ: ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಮತ್ತು ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜುಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ವರ್ಗಾಯಿಸಿರುವ ಹಿನ್ನೆಲೆಯಲ್ಲಿ ಈ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ವಿಶ್ವವಿದ್ಯಾಲಯದಲ್ಲಿ ತಮ್ಮ ಸೇವೆಯನ್ನು ಮುಂದುವರೆಸುವ ಬಗೆಗೆ ತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ಸೂಚಿಸಲಾಗಿತ್ತು. ಅದರಂತೆ ಈ ಎರಡೂ ಕಾಲೇಜುಗಳ ಸಿಬ್ಬಂದಿಗಳು ವಿಶ್ವವಿದ್ಯಾಲಯದಲ್ಲಿ ಮುಂದುವರೆಯುವ ಬಗೆಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುತ್ತಾರೆ. ಕೆಲವರು ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಕೆಲವು ಷರತ್ತುಗಳು ಮತ್ತು ಬೇಡಿಕೆಗಳನ್ನು ಇರಿಸಿರುತ್ತಾರೆ. ವಿವರಗಳು ಈ ಕೆಳಕಂಡಂತಿವೆ:

1. ನಾನು 1998ರಿಂದ ನವೀನನ್ಯಾಯ ಸಹಪ್ರಾಧ್ಯಾಪಕನ ಹುದ್ದೆಯಲ್ಲಿಯೇ ಸೇವೆ ಸಲ್ಲಿಸುತ್ತಿರುವುದರಿಂದ ನನ್ನನ್ನು ಆ ವಿಭಾಗದ ಪ್ರಾಧ್ಯಾಪಕನನ್ನಾಗಿ ಪರಿಗಣಿಸಬೇಕು.
2. ನನಗೆ ಪ್ರಾಧ್ಯಾಪಕ ಹುದ್ದೆಯ ಯು.ಜಿ.ಸಿ. ವೇತನಶ್ರೇಣಿಯನ್ನು ನೀಡಬೇಕು.
3. ನನ್ನ ಈ ಹಿಂದಿನ ಸರ್ಕಾರಿ ಸೇವೆಯನ್ನು ಪಿಂಚಣಿ ಮುಂತಾದವುಗಳಿಗೆ ಪರಿಗಣಿಸಬೇಕು.
4. ನನ್ನ ಈ ಹಿಂದಿನ ಸೇವಾಜ್ಯೇಷ್ಠತೆಯನ್ನು ಪರಿಗಣಿಸಬೇಕು.
5. ಸರ್ಕಾರದಲ್ಲಿದ್ದಂತೆ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ನೀಡಬೇಕು.
6. ಕೆ.ಜಿ.ಐ.ಡಿ., ಜಿ.ಪಿ.ಎಫ್., ಜಿ.ಐ.ಎಸ್.,ಗಳ ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸಬೇಕು.
7. ಮೇಲಿನವುಗಳಲ್ಲದೆ ವಿಶ್ವವಿದ್ಯಾಲಯದ ಬೋಧಕ ಹುದ್ದೆಯಲ್ಲಿರುವ ನೌಕರನಿಗೆ ದೊರೆಯಬಹುದಾದ ಇತರ ಎಲ್ಲ ಸೌಲಭ್ಯಗಳನ್ನು ನೀಡಬೇಕು.
8. ಮುಂದಿನ ವೃಂದ ನಿಯಮಗಳನ್ನು ಅನ್ವಯಿಸುವಾಗ ನೌಕರನ ಹಿತಕ್ಕೆ ಧಕ್ಕೆ ಬರದಂತೆ ಅನ್ವಯಿಸಬೇಕು.

| **ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು–560018.** | | | |
|---|---|---|---|
| **ಕ್ರ.ಸಂ.** | **ಹೆಸರು** | **ಹುದ್ದೆಯ ಪದನಾಮ** | **ಅಭಿಪ್ರಾಯ** |
| 01. | ರಾಧಾಕೃಷ್ಣ ಸಿ. ಶಾಸ್ತ್ರೀ | ಪ್ರಭಾರಿ ಪ್ರಾಚಾರ್ಯರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 02. | ಡಾ. ಎಸ್.ಎನ್. ಸಂಪತ್ಕುಮಾರ್ | ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 03. | ಎಸ್.ಟಿ. ನಾಗರಾಜ | ಪ್ರಾಧ್ಯಾಪಕರು | 30.06.2012ರಂದು ವಯೋನಿವೃತ್ತಿ ಹೊಂದುವುದರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 04. | ಮಂಜುನಾಥ ಭಟ್ಟ ವಿನಾಯಕ | ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 05. | ಜಿ.ಪಿ. ನಾಗರಾಜ | ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 06. | **ಎಸ್. ದಯಾಶಂಕರ್** | ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 07. | **ಎಂ.ಸಿ. ಚರಂತಿಮಠ** | ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 08. | ಕೃಷ್ಣಮೂರ್ತಿ ಬಾಯರಿ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 09. | **ಎಚ್.ಬಿ. ರಾಮೇಗೌಡ** | ಸಹಾಯಕ ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 10. | ಪಂಡಿತಾರಾಧ್ಯ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 11. | ಡಾ. ಎಂ. ಪವಮಾನ ಆಚಾರ್ಯ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |

| | | | |
|---|---|---|---|
| 12. | ಬಿ. ಗುರುರಾಜ ಮಠದ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 13. | ಸುಬ್ರಹ್ಮಣ್ಯ ಭಟ್ಟ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 14. | ಎ. ಅನಂತಕೃಷ್ಣ ಭಟ್ಟ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 15. | ಡಿ. ಬಂಗಾರಗಿರಿ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 16. | ಎಲ್. ನಾರಾಯಣಶರ್ಮಾ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 17. | ಡಾ. ಗೀತಾ ಎನ್. | ಸಾಹಿತ್ಯ ಸಹಾಯಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 18. | **ಬಿ.ಎಲ್. ಮಂಜುನಾಥ** | ಸಾಹಿತ್ಯ ಸಹಾಯಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 19. | ಡಾ. ಪ್ರಭುಲಿಂಗ ಹೆಬ್ಬಾಳ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 20. | ಕೆ.ಆರ್. ರಮಾದೇವಿ | ಗ್ರಂಥಪಾಲಕರು | **ವಿಶ್ವವಿದ್ಯಾಲಯದಲ್ಲಿ ಮುಂದುವರಿಯಲು ಬಯಸಿರುವುದಿಲ್ಲ.** |
| 21. | ಎಸ್. ಸುರೇಶ್ | ಪ್ರ.ದ.ಸ. | **ವಿಶ್ವವಿದ್ಯಾಲಯದಲ್ಲಿ ಮುಂದುವರಿಯಲು ಬಯಸಿರುವುದಿಲ್ಲ.** |
| 22. | ಡಿ.ಎಸ್. ಸುರೇಶ್ | ದ್ವಿ.ದ.ಸ. | **ವಿಶ್ವವಿದ್ಯಾಲಯದಲ್ಲಿ ಮುಂದುವರಿಯಲು ಬಯಸಿರುವುದಿಲ್ಲ.** |
| 23. | ಎಸ್. ಗಂಗರಾಜು | ದ್ವಿ.ದ.ಸ. | **ವಿಶ್ವವಿದ್ಯಾಲಯದಲ್ಲಿ ಮುಂದುವರಿಯಲು ಬಯಸಿರುವುದಿಲ್ಲ.** |
| 24. | ಜಯಮ್ಮ | ತೋಟದ ಮಾಲಿ/ಡಿ ದರ್ಜೆ | **ವಿಶ್ವವಿದ್ಯಾಲಯದಲ್ಲಿ ಮುಂದುವರಿಯಲು ಬಯಸಿರುವುದಿಲ್ಲ.** |

**ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು**

| ಕ್ರ.ಸಂ. | ಹೆಸರು | ಹುದ್ದೆಯ ಪದನಾಮ | ಅಭಿಪ್ರಾಯ |
|---|---|---|---|
| 01. | **ಪ್ರೊ. ಭಾಷ್ಯಂ ಸ್ವಾಮಿ** | ಪ್ರಭಾರಿ ಪ್ರಾಚಾರ್ಯರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 02. | **ಡಾ. ಕೆ.ಎಂ. ಮಹದೇವಯ್ಯ** | ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 03. | **ಕೆ. ಶಿವರುದ್ರಯ್ಯ** | ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 04. | **ಡಾ. ಉದಯ ಭಟ್ಟ** | ಪ್ರಭಾರಿ ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 05. | ಡಾ. ಎಂ.ಎ. ಆಳ್ವಾರ್ | ಸಹಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 06. | **ಎ.ಎಂ. ಚಂದ್ರಶೇಖರ** | ಸಹಾಯಕ ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 07. | **ಪಿ. ಸತ್ಯನಾರಾಯಣ** | ಸಹಾಯಕ ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 08. | **ಎಸ್. ರಾಮಲಿಂಗೇಶ್ವರ ಶರ್ಮಾ** | ಸಹಾಯಕ ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 09. | **ಮಂಜುನಾಥ ಜಿ.** | ಸಹಾಯಕ ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 10. | **ಸುಬ್ರಹ್ಮಣ್ಯ ಗಣಪತಿ ಭಟ್ಟ** | ಸಹಾಯಕ ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 11. | **ಕೆ.ಆರ್. ಶ್ರೀಧರ** | ಸಹಾಯಕ ಪ್ರಾಧ್ಯಾಪಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 12. | **ವಿಜಯಲಕ್ಷ್ಮಿ ಪಿ.ಎಚ್.** | ಸಾಹಿತ್ಯ ಸಹಾಯಕರು | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 13. | ಅಶೋಕ ಶಂಕರಭಟ್ಟ ಪೂಜಾರ | ಪ್ರಾಧ್ಯಾಪಕ | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 14. | ನಾರಾಯಣ | ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 15. | ಡಾ. ವೆಂಕಟರಮಣ ಹೆಗಡೆ | ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 16. | ಡಾ. ಚಕ್ರವರ್ತಿ ರಾಮಚಂದ್ರನ್ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 17. | ಕೆ. ರಮೇಶ ಅಡಿಗ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 18. | ಎನ್. ಸುಬ್ರಹ್ಮಣ್ಯ ಭಟ್ಟ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 19. | ಗಂಗಾಧರ ವಿ. ಭಟ್ಟ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 20. | ಜಿ. ಮಂಜುನಾಥ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 21. | ಎನ್.ಆರ್. ಮುರಳೀಧರ | ಸಹಾಯಕ ಪ್ರಾಧ್ಯಾಪಕರು | ಷರತ್ತು/ಬೇಡಿಕೆಗಳೊಂದಿಗೆ ಮುಂದುವರೆಯಲು ಬಯಸಿರುತ್ತಾರೆ. |
| 22. | **ಟಿ.ಎಸ್. ಮಂಜುಳಾ** | ದಫೇದಾರ್ | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 23. | **ಎಚ್.ಕೆ. ವರಲಕ್ಷ್ಮಿ** | ಗ್ರೂಪ್ ಡಿ. | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 24. | **ಶಿವಲಿಂಗಮ್ಮ** | ಗ್ರೂಪ್ ಡಿ. | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 25. | **ಎನ್. ಕಿರಣ್‌ಕುಮಾರ್** | ಗ್ರೂಪ್ ಡಿ. | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 26. | **ಎನ್. ಕುಮಾರ್** | ಗಣೇಶ ಅರ್ಚಕ/ಗ್ರೂಪ್ ಡಿ | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |
| 27. | **ಎಸ್. ಜಯಸ್ವಾಮಿ** | ದ್ವಿ.ದ.ಸ. | ವಿಶ್ವವಿದ್ಯಾಲಯದಲ್ಲಿ ಮುಂದುವರೆಯಲು ಬಯಸಿದ್ದಾರೆ. |

**ನಿರ್ಣಯ:** **ಸಭೆಯು ಮೇಲ್ಕಂಡ ವಿಷಯವನ್ನು ಆಮೂಲಾಗ್ರವಾಗಿ ಪರಿಶೀಲಿಸಿತು. ವಿಶ್ವವಿದ್ಯಾಲಯಕ್ಕೆ ವಿಲೀನೀಕರಣಗೊಳ್ಳುವಾಗ ಯಾವುದೇ ಷರತ್ತು ಮತ್ತು ಬೇಡಿಕೆಗಳಿಲ್ಲದೆ ಎರಡೂ ಕಾಲೇಜಿನ ಕೆಲವು ಬೋಧಕ–ಬೋಧಕೇತರ ಸಿಬ್ಬಂದಿಗಳು ವಿಲೀನೀಕರಣಗೊಳ್ಳುತ್ತಿರುವ ಪ್ರಕ್ರಿಯೆಗೆ ಸಂತೋಷವನ್ನು ಸೂಚಿಸಿ ತನ್ನ ಸಮ್ಮತಿಯನ್ನು ಸೂಚಿಸಿತು. ಆದರೆ, ಷರತ್ತು ಮತ್ತು ಬೇಡಿಕೆಗಳನ್ನು ಇಟ್ಟಿರುವ ಬೋಧಕ–ಬೋಧಕೇತರ ಸಿಬ್ಬಂದಿಗಳಲ್ಲಿ ಕೇವಲ ಬೇಡಿಕೆಗಳನ್ನು ಮಾತ್ರ ಪರಿಗಣಿಸುವುದು ಸೂಕ್ತವೆಂದು ಸಭೆಯು ನಿರ್ಣಯಿಸಿತು. ಇಂಥ ಬೋಧಕ–ಬೋಧಕೇತರ ಸಿಬ್ಬಂದಿಗಳಿಗೆ ಕೂಡಲೇ ಪ್ರತ್ಯೇಕವಾಗಿ ಪತ್ರ ಬರೆದು, ಅವರ ಅಭಿಪ್ರಾಯವನ್ನು ಪಡೆಯುವುದೆಂದೂ ಅನಂತರ ವಿಲೀನೀಕರಣಗೊಳ್ಳಲು ಒಪ್ಪಿರುವ ಸಿಬ್ಬಂದಿಗಳ ಬೇಡಿಕೆಗಳನ್ನು ಸೂಕ್ತವಾಗಿ ಪರಿಶೀಲಿಸಿ ಸರ್ಕಾರದೊಡನೆ ಸಮನ್ವಯ ನಡೆಸುವುದೆಂದೂ ಸಭೆಯು ಒಟ್ಟಾರೆ ನಿರ್ಣಯಿಸಿತು.**

## ವಿಷಯ 3: ಸಂಸ್ಕೃತ ವಿಕಿಪೀಡಿಯಾ ಯೋಜನೆಯ ಅನುಷ್ಠಾನ ಕುರಿತು ನೋಡಲ್ ಏಜೆನ್ಸಿಯಾದ 'ಸಂಸ್ಕೃತ ಭಾರತಿ'ಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.

ಟಿಪ್ಪಣಿ: ಸಂಸ್ಕೃತ ಭಾಷೆಯ ಜ್ಞಾನಭಂಡಾರವನ್ನು ಜಗದೆಲ್ಲೆಡೆಯಲ್ಲಿ ಪಸರಿಸಲು 'ಸಂಸ್ಕೃತ ಭಾರತಿ'ಯು ಕಳೆದ ಮೂವತ್ತಕ್ಕೂ ಹೆಚ್ಚು ವರ್ಷಗಳಿಂದ ಶ್ರಮಿಸುತ್ತಿದೆ. ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದಿಂದ ನೋಡಲ್ ಏಜೆನ್ಸಿಯಾಗಿ ಇದು ನೇಮಕಗೊಂಡಿರುತ್ತದೆ. ಸಂಸ್ಕೃತ ಭಾರತಿಯು ಎನ್‌ಸಿಇಆರ್‌ಟಿಯ ಸಂಸ್ಕೃತ ಪಠ್ಯಪುಸ್ತಕ ರಚನೆಯಲ್ಲೂ ಸಹಕಾರವನ್ನು ನೀಡುತ್ತಿದೆ. ಇದೀಗ ಅಂತರ್ಜಾಲದ ಮಾಹಿತಿಕೋಶವಾದ ವಿಕಿಪೀಡಿಯಾದಲ್ಲಿ ಸಂಸ್ಕೃತ ಭಾಷೆಯ ಜಾಲಪುಟವನ್ನು ನಿರ್ಮಿಸಲು ಸಂಸ್ಕೃತ ಭಾರತಿಯು ಸಹಯೋಗವನ್ನು ನೀಡುತ್ತಿರುತ್ತದೆ ಹಾಗೂ ಮುಖ್ಯ ಪ್ರವರ್ತಕರಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಸಂಸ್ಕೃತ ವಿಕಿಪೀಡಿಯಾದಲ್ಲಿ ಭಾಷಾಧ್ಯಯನದೊಂದಿಗೆ ಶಾಸ್ತ್ರಾಧ್ಯಯನವನ್ನು ಕೈಗೊಂಡಂತಹ ಪ್ರತಿ ವಿದ್ಯಾರ್ಥಿಯಿಂದಲೂ ಶುದ್ಧ ಹಾಗೂ ಸರಳ ಸಂಸ್ಕೃತದ ಲೇಖನಗಳನ್ನು ಬರೆಸುವುದಲ್ಲದೆ, ಅಧ್ಯಾಪನ, ಸಂಶೋಧನೆ, ಕೃತಿ ರಚನೆ –ಇತ್ಯಾದಿಗಳನ್ನು ಸಂಸ್ಕೃತದಲ್ಲಿ ರಚಿಸುತ್ತ, ಆಧುನಿಕ ಸಂಗಣಕ ಕ್ಷೇತ್ರದ ಪರಿಚಯದೊಂದಿಗೆ ಸಂಸ್ಕೃತ ಹಾಗೂ ತತ್ಸಂಬಂಧಿತ ಜ್ಞಾನಭಂಡಾರವನ್ನು ವಿಶ್ವಕ್ಕೆ ಪರಿಚಯಿಸಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯವನ್ನು ಸಂಸ್ಥೆಯು ಕೋರಿರುತ್ತದೆ. ಇದರಲ್ಲಿ ತಾಂತ್ರಿಕ ಮತ್ತು ಭಾಷಿಕ ತರಬೇತಿಗಳನ್ನು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದು, ಮೊದಲ ಹಂತದಲ್ಲಿ ಒಂದು ವರ್ಷದ ಹಾಗೂ ಎರಡನೇ ಹಂತದಲ್ಲಿ ಮೂರು ವರ್ಷಗಳ ಯೋಜನೆಯು ಇದಾಗಿದ್ದು, ಇದಕ್ಕೆ ವಾರ್ಷಿಕ ರೂ. 15 ಲಕ್ಷಗಳ ಆಯ–ವ್ಯಯವನ್ನು ಸಿದ್ಧಪಡಿಸಲಾಗಿದೆ. ಈ ಕುರಿತು ದಿನಾಂಕ: 05.06.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆಯು ನಡೆದಿದ್ದು, ಸಂಸ್ಕೃತ ವಿಕಿಪೀಡಿಯಾ ಯೋಜನೆಗೆ ಸಂಬಂಧಿಸಿ ಒಂದು ಸಮಿತಿ ರಚನೆಯನ್ನು ಮಾಡಬೇಕಿದ್ದು, ಈ ಕುರಿತು ಸಭೆಯ ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

**ನಿರ್ಣಯ:** **ಮೇಲ್ಕಂಡ ವಿಷಯವನ್ನು ಸಭೆಯು ಚರ್ಚಿಸಿ ಈ ಬಗೆಗೆ ಭಾಷಾ ನಿಕಾಯದ ಡೀನ್ ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿಯೊಂದನ್ನು ರಚಿಸಲು ಸಭೆಯು ಅಂಗೀಕರಿಸಿ ನಿರ್ಣಯಿಸಿತು. ಇವರು ಆದಷ್ಟು ಬೇಗ ಸಭೆ ಸೇರಿ ಪ್ರಕಲ್ಪವನ್ನು ಕೈಗೆತ್ತಿಕೊಳ್ಳಬೇಕೆಂದು ಸೂಚಿಸಿತು.**

| | | |
|---|---|---|
| 1. | ಡೀನ್ | ಅಧ್ಯಕ್ಷರು |
| 2. | ಪ್ರೊ. ಟಿ.ಎಸ್. ಸತ್ಯವತಿ | ಸದಸ್ಯರು |
| 3. | ಶ್ರೀ ಸತ್ಯನಾರಾಯಣ ಭಟ್ | ಸದಸ್ಯರು |
| 4. | ಶ್ರೀ ಶ್ರೀನಿವಾಸನ್ | ಸದಸ್ಯರು |

## ವಿಷಯ 4: ಕಾನೂನು ಸಲಹೆಗಾರರ ಮಾಸಿಕ ಭತ್ಯೆ ಏರಿಸುವ ಬಗೆಗೆ.

ಟಿಪ್ಪಣಿ: ಶ್ರೀ ಸಿ. ವೆಂಕಟೇಶ್ –ಇವರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾಗಿ ಮಾರ್ಚ್ 15, 2011ರಿಂದ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಇವರಿಗೆ ಪ್ರಯಾಣವೆಚ್ಚ (ರೂ. 1200/–), ದೂರವಾಣಿ ವೆಚ್ಚ (ರೂ. 300/–) ಮತ್ತು ಕಾನೂನು ಸಲಹೆಗಾರರ ಶುಲ್ಕ (ರೂ. 2000/–) ಸೇರಿದಂತೆ ಒಟ್ಟು ರೂ. 3500/–ಗಳನ್ನು ವಿಶ್ವವಿದ್ಯಾಲಯದಿಂದ ನೀಡಲಾಗುತ್ತಿದೆ. ಇವರು ವಿಶ್ವವಿದ್ಯಾಲಯದ ಪರವಾಗಿ ಅನೇಕ ದಾವೆಗಳಲ್ಲಿ ಪ್ರತಿನಿಧಿಸುತ್ತಿದ್ದಾರೆ. ಹಾಲಿ ಕಾನೂನು ಸಲಹೆಗಾರರು ಶುಲ್ಕವಾಗಿ ರೂ. 10,000/–ಗಳನ್ನು ಕೋರಿ ಪತ್ರವನ್ನು ಸಲ್ಲಿಸಿದ್ದಾರೆ. ಈ ಕುರಿತು ಸಭಾ ನಿರ್ಣಯಕ್ಕೆ ಮಂಡಿಸಿದೆ.

**ನಿರ್ಣಯ:** **ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟೇಶ್ ಅವರ ಕೋರಿಕೆ ಪತ್ರವನ್ನು ವಿಷದವಾಗಿ ಪರಿಶೀಲಿಸಿದ ಸಭೆಯು ರೂ. 5000/–ಗಳಿಗೆ ಮಾಸಿಕ ಭತ್ಯೆಯನ್ನು ಏರಿಸಲು ಸಭೆಯು ನಿರ್ಣಯಿಸಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು